

ಮಾತ್ರ ರೀಸೈಕಲ್ ಆಗುತ್ತಿದ್ದು, ಉಳಿದದ್ದೆಲ್ಲ ಕಸದ ಗುಂಡಿ ಸೇರುತ್ತಿರುವುದು ಮಾಲಿನ್ಯ ನಿಯಂತ್ರಣ ವ್ಯವಸ್ಥೆಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಪ್ರತಿ ವರ್ಷ ಬಟ್ಟೆಯಿಂದ ಹೊಮ್ಮುವ 2 ಲಕ್ಷ ಟನ್‌ನಷ್ಟು ಮೈಕ್ರೋ ಪ್ಲಾಸ್ಟಿಕ್ ಸಮುದ್ರ ಸೇರುತ್ತಿದೆ.

- **IUCN** ಲೆಕ್ಕಾಚಾರದ ಪ್ರಕಾರ ಸಾಗರ ತಳದಲ್ಲಿರುವ ಎಂದೆಂದೂ ನಾಶವಾಗದ ಮೈಕ್ರೋ ಪ್ಲಾಸ್ಟಿಕ್‌ನ ಒಟ್ಟು ಪ್ರಮಾಣದಲ್ಲಿ ಶೇ 35ರಷ್ಟು ಪ್ರಮಾಣ ಪಾಲಿಯೆಸ್ಟರ್ ಬಟ್ಟೆಗಳಿಂದ ಉಂಟಾಗಿದೆ ಎಂದು ವರದಿಯಾಗಿದೆ.

ಉಜಬೆಕಿಸ್ತಾನದ ಬಟ್ಟೆಯ ಕಾರ್ಖಾನೆಯಲ್ಲಿ ಹತ್ತಿ ಉಡುಪು ತಯಾರಿಕೆಗೆ ಬೇಕಾದ ನೀರನ್ನು ಅಲ್ಲಿನ ಅರಲ ಸರೋವರದಿಂದ ಪಡೆಯಲಾಗುತ್ತಿತ್ತು. 50 ವರ್ಷಗಳವರೆಗೆ ನೀರು ನೀಡಿದ ಸರೋವರ ಈಗ ಒಣಗಿ ಮರುಭೂಮಿಯಾಗಿದೆ.

- ವಸ್ತ್ರ ತಯಾರಿಸಲು ಬಳಸುವ ಫೈಬರ್‌ನಲ್ಲಿ ಶೇ 87ರಷ್ಟು ದಹನಗೊಳ್ಳುತ್ತದೆ, ಇಲ್ಲವೇ ಕಸದಂತೆ ಭೂಮಿಯ ಒಡಲು ಸೇರುತ್ತದೆ.
- ಪ್ರತಿ ಬಟ್ಟೆಯನ್ನು ಕೇವಲ 10 ಬಾರಿ ಬಳಸಿ ಬಿಸಾಡಿದರೆ ವಾತಾವರಣಕ್ಕೆ ನಾವು ಹೊಮ್ಮಿಸುವ ಇಂಗಾಲ ಶೇ. 400ರಷ್ಟು ಹೆಚ್ಚುತ್ತದೆ.

### ಕೊಳ್ಳುಬಾಕ ಸಂಸ್ಕೃತಿ ತಾರಕಕ್ಕೆ

ಹಿಂದೆಲ್ಲ ಋತುಮಾನಗಳಿಗನುಗುಣವಾಗಿ ಫ್ಯಾಷನ್ ಟ್ರೆಂಡ್ ನವೀಕರಣಗೊಳ್ಳುತ್ತಿತ್ತು. ಈಗ ವರ್ಷದ ಎಲ್ಲ ದಿನಗಳಲ್ಲೂ ಫ್ಯಾಷನ್ ಬದಲಾಗುತ್ತದೆ. ಕಡಿಮೆ ಬೆಲೆಗೆ ದೊರೆಯುವ ಬಟ್ಟೆಗಳಂತೂ ವಾರಕ್ಕೊಂದರಂತೆ ಮಾರುಕಟ್ಟೆ ಜಾಲ ಪ್ರವೇಶಿಸುತ್ತವೆ. ಪ್ರಸ್ತುತ ಪ್ರತೀ ವರ್ಷ ನೂರು ಶತಕೋಟಿ ಕಡಿಮೆ ಬೆಲೆಯ ಬಟ್ಟೆಗಳು ಮಾರುಕಟ್ಟೆಗೆ ಬಂದು ಬೀಳುತ್ತವೆ. ಕೊಳ್ಳುಬಾಕ ಮನೋಭಾವದ ಫಲವಾಗಿ ಇಪ್ಪತ್ತು ವರ್ಷಗಳ ಹಿಂದಿನ ಸ್ಥಿತಿಗೆ ಹೋಲಿಸಿದರೆ ಅದು ಶೇ 60ರಷ್ಟು ವೃದ್ಧಿಗೊಂಡಿದೆ.

ಕೊಳ್ಳುವುದಷ್ಟೇ ಅಲ್ಲ, ಉಪಯೋಗಿಸದೆ ಬಿಸಾಡುವ ಪ್ರವೃತ್ತಿಯೂ ಏರುಗತಿಯಲ್ಲಿದೆ. ಬ್ರಿಟನ್ನಿನ ಎಲೆನ್ ಮೆಕಾರ್ಥರ್ ಸಮಾಜಸೇವಾ ಸಂಸ್ಥೆಯ ವರದಿಯಂತೆ ವಾರ್ಷಿಕ 500 ಶತಕೋಟಿ ಡಾಲರ್ ಮೌಲ್ಯದ ಕೊಂಡ ಹೊಸ ಬಟ್ಟೆಗಳನ್ನು ಬಳಸದೆ, ರೀಸೈಕಲ್ ಮಾಡದೆ, ದಾನಮಾಡದೆ, ಕಸದ ಗುಂಡಿಗೆ ಎಸೆಯಲಾಗುತ್ತದೆ. ಪ್ರತಿ ಪುರುಷ ತಿಂಗಳಿಗೆ ಸರಾಸರಿ 161 ಡಾಲರ್ ಹಣ ಖರ್ಚು ಮಾಡಿದರೆ, ಮಹಿಳೆ ಸುಮಾರು 240 ಡಾಲರ್ ಹಣ ವ್ಯಯಿಸುತ್ತಾಳೆ. ನಾಲ್ಕು ಜನರನ್ನು ಹೊಂದಿರುವ ಕುಟುಂಬವೊಂದು ವಾರ್ಷಿಕ 2500 ಡಾಲರ್ ಹಣ ಖರ್ಚು ಮಾಡುತ್ತದೆ ಎಂಬ ಮಾಹಿತಿ ಇದೆ. ನಮ್ಮಲ್ಲಿ ಪೂರ್ಣಾವಧಿ ನೌಕರಿಯಲ್ಲಿರುವ ಕೆಲಸಗಾರರು 1500 ರೂಗಿಂತ ಹೆಚ್ಚು ಹಣವನ್ನು ಪ್ರತಿ ತಿಂಗಳು ಬಟ್ಟೆ ಖರೀದಿಗೆ ಬಳಸುತ್ತಾರೆ. ಮಹಿಳೆಯರು ಸುಮಾರು 2300 ರೂ ಖರ್ಚು ಮಾಡುತ್ತಾರೆ. ಭಾರತದಲ್ಲಿ 35ರಿಂದ 44 ವಯಸ್ಸಿನೊಳಗಿನ ಜನ ಪ್ರತೀ ತಿಂಗಳು ಸರಾಸರಿ 2500 ರೂಪಾಯಿಗಳನ್ನು ಹೊಸ ಉಡುಪುಗಳ ಮೇಲೆ ಖರ್ಚು ಮಾಡುತ್ತಾರೆ. ಇನ್ನೂ ಒಂದು ವರದಿಯಂತೆ, ತಮ್ಮ ಗಳಿಕೆಯ ಮೂರನೆಯ ಒಂದು ಭಾಗವನ್ನು ಉಡುಪುಗಳಿಗಾಗಿ ವ್ಯಯಿಸಿ ತಮ್ಮ ವಾರ್ಡ್‌ರೋಬ್‌ಗಳಿಗೆ ತುಂಬಿಕೊಳ್ಳುತ್ತಾರೆ. ಸೌಂದರ್ಯ ವರ್ಧನೆ, ಗುಣಮಟ್ಟ ಮತ್ತು ಬಾಳಿಕೆ, ಇವು ಮೂರು ಅಂಶಗಳು ಹೊಸ ಬಟ್ಟೆ ಕೊಂಡು ತೊಡುವವರ ಮನಸ್ಸಿನಲ್ಲಿ ಸದಾ ಇರುತ್ತವೆ. ಈ ಮೂರೂ ಅಂಶಗಳನ್ನು ಒಳಗೊಂಡ ಬಟ್ಟೆಗಳು ಮಾರುಕಟ್ಟೆಗೆ ಬರುವುದು ಅಪರೂಪ ಎನ್ನುವ ಗ್ರಾಹಕರು, ಸ್ವಲ್ಪ ದುಬಾರಿಯಾದರೂ ಚಿಂತೆ ಇಲ್ಲ, ಬ್ರ್ಯಾಂಡೆಡ್ ಬಟ್ಟೆಗಳಲ್ಲಿ ಲಭ್ಯವಿರುವುದರಿಂದ ನಾವು ಅವುಗಳನ್ನೇ ಹೆಚ್ಚು ಖರೀದಿಸುತ್ತೇವೆ ಎನ್ನುತ್ತಾರೆ.

### ವಾಯುಗುಣ ವೈಪರೀತ್ಯ ಮತ್ತು ಫ್ಯಾಷನ್ ಸೂತ್ರ

2018ರಲ್ಲಿ ಪ್ರಪಂಚದ ಖ್ಯಾತ ಫ್ಯಾಷನ್ ಬ್ರ್ಯಾಂಡ್ ಮತ್ತು ಎನ್‌ಜಿಓಗಳು ಜಂಟಿಯಾಗಿ ಪ್ರಾರಂಭಿಸಿದ 'ಫ್ಯಾಷನ್ ಇಂಡಸ್ಟ್ರಿ ಚಾರ್ಟರ್ ಫಾರ್ ಕ್ಲೈಮೇಟ್ ಚೇಂಜ್' ವೇದಿಕೆಯು, ಪ್ಯಾರಿಸ್ ಒಪ್ಪಂದದಲ್ಲಿ ಇರುವುದನ್ನು ನಾವೆಲ್ಲ ಪಾಲಿಸಲೇಬೇಕಿದೆ ಮತ್ತು ಅದಕ್ಕಾಗಿ ಬೇಕಾದ ಕ್ರಮಗಳನ್ನು ಕೈಗೊಳ್ಳಲು ಫ್ಯಾಷನ್ ಇಂಡಸ್ಟ್ರಿ ತನ್ನ ಉತ್ಪಾದನೆ ನಿರ್ವಹಣೆ ಕ್ರಮಗಳಲ್ಲಿ ಆಮೂಲಾಗ್ರ ಬದಲಾವಣೆ ಕಂಡುಕೊಳ್ಳಲೇಬೇಕಿದೆ ಎಂದಿದೆ. ಪ್ಯಾರಿಸ್ ಒಪ್ಪಂದದಂತೆ ಇಂಗಾಲದ ಹೊಮ್ಮುವಿಕೆ 2030ಕ್ಕೆ ಶೇ 30ರಷ್ಟು ಕಡಿಮೆಯಾಗಬೇಕು ಮತ್ತು 2050ರ ಹೊತ್ತಿಗೆ ಶೂನ್ಯ ಪ್ರಮಾಣದಲ್ಲಿರಬೇಕು.

ವಿಶ್ವದ ಆರ್ಥಿಕತೆಗೆ ಬಲ ತುಂಬುತ್ತಿರುವ ಫ್ಯಾಷನ್ ಉದ್ಯಮ 2.4 ಶತಕೋಟಿ ಡಾಲರ್ ಮಾರುಕಟ್ಟೆ ಮೌಲ್ಯ ಹೊಂದಿದ್ದು, 75 ದಶ ಲಕ್ಷ ಜನರಿಗೆ ನೇರ ಉದ್ಯೋಗ ಕಲ್ಪಿಸಿಕೊಟ್ಟಿದೆ. ಜಗತ್ತಿನ ಮೂರನೇ ಅತಿ ಮುಖ್ಯ ಉತ್ಪಾದನಾ ರಂಗವಾಗಿರುವ ವಸ್ತ್ರೋದ್ಯಮ ಪರಿಸರ ಸ್ನೇಹಿಯಾಗಿದ್ದುಕೊಂಡು ಬೆಳೆಯಬೇಕಾದ ಅನಿವಾರ್ಯತೆಗೆ ಸಿಲುಕಿದೆ. ಲಭ್ಯವಿರುವ ಆಧುನಿಕ ತಂತ್ರಜ್ಞಾನ ಬಳಸಿಕೊಂಡು, ಬಳಸಿ ಬಿಸಾಡಿದ ಸಾಮಗ್ರಿಗಳಿಂದ ಮರು ಉತ್ಪನ್ನ ಸಾಧಿಸಬೇಕಿದೆ. ಮೀನಿನ ಚರ್ಮ ಮತ್ತು ನೈಸರ್ಗಿಕ ವರ್ಣಕಾರಕಗಳನ್ನು ಬಳಸುವುದರಿಂದ ಲ್ಯಾಬ್‌ನ ಕೆಮಿಕಲ್ ಬಳಸುವುದನ್ನು ನಿಲ್ಲಿಸಬಹುದಾಗಿದೆ. ಹಣ್ಣಿನ ಸಿಪ್ಪೆ, ಬಳಸಿ ಬಿಸಾಡಿದ ಕ್ಯಾನ್ವಾಸ್‌ಗಳಿಂದ ವಿದ್ಯಾರ್ಥಿಗಳ ಸ್ಕೂಲ್ ಬ್ಯಾಗ್, ಸ್ವೆಟರ್‌ಗಳನ್ನು ತಯಾರಿಸಲಾಗುತ್ತಿದೆ. ಕೆಲವು ಕಂಪನಿಗಳು ಬಳಸಿದ ಬಟ್ಟೆಗಳನ್ನು ಹಿಂಪಡೆದು, ಹೊಸ ರೂಪ ನೀಡಿ ಮತ್ತೆ ಮಾರಾಟ ಮಾಡುವ ಕ್ರಮ ಕೈಗೊಂಡಿವೆ. ಸ್ಥಳೀಯ ಜೀವಿ ವೈವಿಧ್ಯ ಮತ್ತು ಪರಿಸರಕ್ಕನುಗುಣವಾಗಿ ಫ್ಯಾಷನ್ ಟ್ರೆಂಡ್ ಹುಟ್ಟು ಹಾಕುವ ಪ್ರಯತ್ನ ಮಾಡುತ್ತಿರುವ ಜರ್ಮನಿಯ 'ಹಿಲೊ ಸಾಗ್ರಡೊ' ಮತ್ತು 'ಏವಿಯಾ' ಕಂಪನಿಗಳಿಗೆ ವಿಶ್ವ ಬ್ಯಾಂಕ್ ಹಣಕಾಸಿನ ನೆರವು ನೀಡಿದೆ.

ವಸ್ತ್ರೋದ್ಯಮದಿಂದ ವಾತಾವರಣದ ಮೇಲಾಗುವ ಅಡ್ಡ ಪರಿಣಾಮಗಳನ್ನು ಅರಿಯಲು, ತಡೆಯಲು ಹಲವು ಕ್ರಮಗಳನ್ನು ಅನುಸರಿಸುತ್ತಿರುವ ಸರ್ಕಾರಗಳು ವಾರ್ಷಿಕ ಆಡಿಟ್‌ಗಳನ್ನೂ ಮಾಡುತ್ತವೆ. ಬಟ್ಟೆಯ ಉದ್ಯಮ ಹೊಮ್ಮಿಸುವ ಇಂಗಾಲದ ಡೈಆಕ್ಸೈಡ್, ತ್ಯಾಜ್ಯ, ಕಲುಷಿತ ನೀರು, ಕಚ್ಚಾ ವಸ್ತುವಿನ ಬಳಕೆ, ಸಂಪನ್ಮೂಲ ಶೋಷಣೆ, ಗುಣಮಟ್ಟ ತಪಾಸಣೆ, ಡೈಯಿಂಗ್, ವಾಶಿಂಗ್ ಹೀಗೆ ಹತ್ತಾರು ಅಂಶಗಳನ್ನು ಹೊಂದಿರುವ ವಸ್ತ್ರೋದ್ಯಮದ ವಿವಿಧ ಹಂತಗಳಲ್ಲಿ ಸಂತುಲಿತ ಕ್ರಮಗಳನ್ನು ಅನುಸರಿಸಿ ನಿಭಾಯಿಸಿದಲ್ಲಿ, ತೊಡುವ ಬಟ್ಟೆ ನಾವಂದುಕೊಂಡ ಹಿತ ನೀಡಬಲ್ಲದು. ಅಗತ್ಯವಿರುವವರಿಗೆ ದಾನ ಮಾಡಿದರೆ ಫ್ಯಾಷನ್ ಉದ್ಯಮ ಸೌಂದರ್ಯವರ್ಧಕವಾಗುವುದರ ಜೊತೆ ಪರಿಸರಸ್ನೇಹಿಯೂ ಆಗಬಲ್ಲದು. ಈ ಪರಿಸರಸ್ನೇಹಿ ನಡೆ ನಾವೂ ಪಾಲುದಾರರಾದಾಗ ಮಾತ್ರ ಸಾಧ್ಯ.

ಪ್ರತಿಕ್ರಿಯಿಸಿ: **feedback@sudha.co.in**